ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1409/2020

ಚಾಸಾ:3 ಪ್ರಾಸಾ:5

ದಿನಾಂಕ: 22.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಶಶಿಕಾಂತ್ ಶೆಟ್ಟಿ |
| ತಂದೆಯ ಹೆಸರು | : | ವಿ. ಶೇಖರ ಶೆಟ್ಟಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಬಳ್ಕೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಸುಮಾರು 4-5 ವರ್ಷಗಳ ಹಿಂದೆ ಪೊಲೀಸರು ಬಳ್ಕೂರಿನಲ್ಲಿ ಅಪಘಾತವಾಗಿದೆ ಎಂದು ತಿಳಿಸಿ ಠಾಣೆಗೆ ಕರೆಯಿಸಿರುತ್ತಾರೆ. ಅಲ್ಲಿ ಒಂದು ಸಹಿ ಮಾಡುವಂತೆ ಕೋರಿರುತ್ತಾರೆ. ಅಪಘಾತದಿಂದ ಯಾರಿಗೋ ಸಣ್ಣಗಾಯವಾಗಿದೆ ಎಂದು ತಿಳಿಸಿರುತ್ತಾರೆ. ಶೇಖರಶೆಟ್ಟಿರವರ ಪರಿಚಯವಿಲ್ಲ. ಚಾಸಾ-1 ರವರ ಪರಿಚಯವಿಲ್ಲ. ಆರೋಪಿಯ ಪರಿಚಯವಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ನಾನು ಬಟ್ಟೆ, ಬ್ಯಾಗು ವ್ಯಾಪಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಅದೇ ಕೆಲಸದಲ್ಲಿ ದಿ: 17-03-2020 ರಂದು ಸಿದ್ದಾಪುರಕ್ಕೆ ಸ್ಕೂಟರ್ ನಲ್ಲಿ ಹೋಗುತ್ತಿದ್ದು ಸಂಜೆ 6-30 ರ ಸಮಯದಲ್ಲಿ ಕಂಡ್ಲೂರು ಪೇಟೆಯ ಶಾಲೆಯ ಬಳಿ ಆರೋಪಿ ಯಾವುದೇ ಸೂಚನೆ ನೀಡಿದೆ ದ್ವಿ ಚಕ್ರ ವಾಹನವನ್ನು ಏಕಾಏಕಿ ತಿರುಗಿಸಿದ್ದು, ಅಂಪಾರು ಕಡೆಯಿಂದ ಕುಂದಾಪುರದ ಕಡೆಗೆ ಬರುತ್ತಿದ್ದ ಚಾಸಾ-1 ರವರ ವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ ಅದರ ಸವಾರರಾದ ಚಾಸಾ-1

ಮತ್ತು ಶೇಖರಶೆಟ್ಟಿರವರು ತೀವ್ರವಾಗಿ ಗಾಯಗೊಂಡು ಆರೋಪಿ ಸಹ ಗಾಯಗೊಂಡಿದ್ದರು ಎಂದರೆ ನನಗೆ ತಿಳಿದಿಲ್ಲ.

ಆರೋಪಿಯು ಸಹ ಗಾಯಗೊಂಡಿದ್ದ ಹಿನ್ನೆಲೆಯಲ್ಲಿ ಎಲ್ಲರನ್ನೂ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ ಎಂದರೆ ನನಗೆ ತಿಳಿದಿಲ್ಲ. ಈ ಬಗ್ಗೆ ನಾನು ದಿಃ 18-03-2020 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ಹೆಚ್ಚಿನ ಚಿಕಿತ್ಸೆಗಾಗಿ ಶೇಖರ ಶೆಟ್ಟಿರವರನ್ನು ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಿಸಿದ್ದು ಆತ ಚಿಕಿತ್ಸೆ ಫಲಕಾರಿಯಾಗದೆ ದಿಃ 19-03-2020ರ ಬೆಳಗ್ಗೆ 9-30ರ ವೇಳೆಗೆ ಮೃತಪಟ್ಟ ವಿಚಾರ ತಿಳಿಯಿತು ಎಂದರೆ ನನಗೆ ತಿಳಿದಿಲ್ಲ. ಸದ್ರಿ ಅಪಘಾತಕ್ಕೆ ಆರೋಪಿಯು ಅತೀ ವೇಗ ಹಾಗೂ ನಿರ್ಲಕ್ಷ್ಯತನದಿಂದ ತನ್ನ ಕೆಎ-20-ಇಎ-3183 ವಾಹನವನ್ನು ಚಲಾಯಿಸಿದ್ದು ಎಂದು ತಿಳಿದಿದ್ದರೂ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯ ಮರುಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**